# ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ
# KARNATAKA LEGISLATIVE ASSEMBLY RESEARCH AND REFERENCE BRANCH

## ಪತ್ರಿಕಾ ತುಣುಕುಗಳು
## PAPER CLIPPINGS

ಇಲಾಖೆ / ವಿಷಯ : DEPARTMENT / SUBJECT: ಕರ್ನಾಟಕ ವಿಧಾನ ಪರಿಷತ್

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯ ಕರ್ನಾಟಕ ದಿನಾಂಕ : DATE : 28/1/20

# ರಾಜ್ಯದಲ್ಲೂ ಆಗಾಗ ನಡೆದಿದೆ ಪರಿಷತ್ ವಿಸರ್ಜನೆ ಪ್ರಸ್ತಾಪ

■ **ವಿಕ ಸುದ್ದಿಲೋಕ** ಬೆಂಗಳೂರು 28/1/20

ರಾಜ್ಯದಲ್ಲೂ ವಿಧಾನ ಪರಿಷತ್ ವಿಸರ್ಜನೆ ಮಾಡುವ ಬಗ್ಗೆ ಹಲವು ಬಾರಿ ಪ್ರಸ್ತಾಪವಾಗಿದೆ. ಈ ಹಿಂದೆ ಶಾಸಕರೊಬ್ಬರು ಈ ಸಂಬಂಧ ಖಾಸಗಿ ವಿಧೇಯಕವನ್ನೂ ಮಂಡಿಸಿದ್ದರು. ಆದರೆ, ಶಾಸಕರೆಲ್ಲ ಪಕ್ಷಭೇದ ಮರೆತು ಮೇಲ್ಮನೆಯ ಅಗತ್ಯದ ಬಗ್ಗೆ ಪ್ರತಿಪಾದನೆ ಮಾಡಿದ್ದರು.

ಸಿದ್ದರಾಮಯ್ಯ ಸಿಎಂ ಆಗಿದ್ದಾಗ ಬೆಳಗಾವಿ ಸುವರ್ಣಸೌಧದಲ್ಲಿ ನಡೆದ ಅಧಿವೇಶನದ ವೇಳೆ ಜೆಡಿಎಸ್‌ನ ಅಂದಿನ ಶಾಸಕ ಎಂ.ಟಿ.ಕೃಷ್ಣಪ್ಪ ಮೇಲ್ಮನೆ ರದ್ದುಗೊಳಿಸುವ ಪ್ರಸ್ತಾವದೊಂದಿಗೆ ಖಾಸಗಿ ವಿಧೇಯಕ ಮಂಡಿಸಿದ್ದರು. ಮೇಲ್ಮನೆಯಿಂದ ಬೊಕ್ಕಸಕ್ಕೆ ನಷ್ಟವಾಗುತ್ತದೆ. ಕರ್ನಾಟಕ ಸೇರಿ ಆರು ರಾಜ್ಯ ಹೊರತುಪಡಿಸಿ ಉಳಿದ ರಾಜ್ಯಗಳಲ್ಲಿ ಮೇಲ್ಮನೆಯಿಲ್ಲ, ಹಾಗಾಗಿ ರಾಜ್ಯದಲ್ಲೂ ವಿಧಾನ ಪರಿಷತ್ ರದ್ದುಗೊಳಿಸುವುದು ಸೂಕ್ತವೆಂದು ಕೃಷ್ಣಪ್ಪ ಅಭಿಪ್ರಾಯಪಟ್ಟಿದ್ದರು. ಆದರೆ, ಸದನದ ಯಾವ ಸದಸ್ಯರೂ ಕೃಷ್ಣಪ್ಪ ಅವರಿಗೆ ಬೆಂಬಲಿಸಿರಲಿಲ್ಲ. ಸದನದ ಹೊರಗೂ ಹಲವರು ವಿರೋಧ ವ್ಯಕ್ತಪಡಿಸಿ ಹೇಳಿಕೆ ನೀಡಿದ್ದರು.

ಈ ನಡುವೆ ಸಾರ್ವಜನಿಕ ವಲಯದಲ್ಲೂ ವಿಧಾನ ಪರಿಷತ್ ಅಗತ್ಯದ ಬಗ್ಗೆ ಅನೇಕ ಬಾರಿ ಚರ್ಚೆಯಾದದ್ದಿದೆ. ಆದರೆ, ಕಿರಿಯರ ಮನೆಯಲ್ಲಿ ರೂಪಿಸುವ ವಿಧೇಯಕಗಳ ಲೋಪದೋಷ ತಿದ್ದುಪಡಿಗೆ ಹಿರಿಯರ ಮನೆಯ ಸದಸ್ಯರ ಸಲಹೆ ಅಗತ್ಯ. ಈ ಸಂಬಂಧ ಪರಿಷತ್‌ನಲ್ಲಿ ಮಂಥನ ನಡೆಯಬೇಕು ಎಂಬ ಅಭಿಪ್ರಾಯಕ್ಕೆ ಎಲ್ಲ ಕಾಲದಲ್ಲೂ ಬಲ ಬಂದಿತ್ತು.



ಮೇಲ್ಮನೆ ಒಂದು ರೀತಿ ಪ್ರೂಫ್ ರೀಡರ್ ಇದ್ದಹಾಗೆ. ಕೆಳಮನೆಯಲ್ಲಾದ ತಪ್ಪುಗಳನ್ನು ಸರಿಪಡಿಸಲು ಮೇಲ್ಮನೆ ಅಗತ್ಯ. ರಾಜ್ಯಸಭೆಯನ್ನೂ ರದ್ದು ಮಾಡುವಂತಿಲ್ಲ, ರಾಜ್ಯಸಭೆಯ ಅಗತ್ಯದ ಬಗ್ಗೆ ಸಂವಿಧಾನದಲ್ಲೆ ಸ್ಪಷ್ಟವಾಗಿ ಹೇಳಲಾಗಿದೆ.

**-ಮಲ್ಲಿಕಾರ್ಜುನ ಖರ್ಗೆ**
ಕಾಂಗ್ರೆಸ್ ನಾಯಕ



ಮೇಲ್ಮನೆ ಇರಬೇಕು ಎನ್ನುವುದು ನನ್ನ ಅಭಿಪ್ರಾಯ. ಕೆಳಮನೆಯಲ್ಲಿ ಪಾಸು ಮಾಡಿದ ವಿಧೇಯಕ ಇನ್ನಿತರ ವಿಚಾರಗಳ ಮೇಲೆ ಇನ್ನಷ್ಟು ಬೆಳಕು ಚೆಲ್ಲಿ ಚರ್ಚಿಸಲು ಮೇಲ್ಮನೆಯ ಅಗತ್ಯವಿದೆ.

**-ಕೆ.ಬಿ.ಕೋಳಿವಾಡ**
ಮಾಜಿ ಸ್ಪೀಕರ್